ಇ) ಹೌದು

ಈ) 03-08-1989

ಉ) ಸರ್ಕಾರದ ಹಣಕಾಸು ಪರಿಸ್ಥಿತಿಯನ್ನು ಮತ್ತು ಇತರೆ ಸುಸಂಬದ್ಧ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಲಾಗುವುದು.

ರಾಜ್ಯದ ದೈಹಿಕ ಶಿಕ್ಷಕರ ಬಗ್ಗೆ

1202 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೈಹಿಕ ಶಿಕ್ಷಕರನ್ನು ಸಹಾಯಕ ಶಿಕ್ಷಕರೆಂದು ಪರಿಗಣಿಸಲಾಗಿಲ್ಲಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ದೈಹಿಕ ಶಿಕ್ಷಕರನ್ನು ಸಹಾಯಕ ಶಿಕ್ಷಕರೆಂದು ಪರಿಗಣಿಸಲು ಸರ್ಕಾರದವರಿಗೆ ಇರುವ ತೊಂದರೆಗಳೇನು ಹಾಗೂ ಯಾವಾಗ ಪರಿಗಣಿಸಲಾಗುವುದು.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರಿಗೆ ಪ್ರತ್ಯೇಕವಾದ ವೃಂದವಿದೆ. ದೈಹಿಕ ಶಿಕ್ಷಣವು ಪರ್ಯೇತರ ವಿಷಯವಾಗಿದ್ದು ಪರೀಕ್ಷಾ ವಿಷಯವಾಗಿಲ್ಲದಿರುವುದರಿಂದ ದೈಹಿಕ ಶಿಕ್ಷಕರನ್ನು ಸಹಾಯಕ ಶಿಕ್ಷಕರೆಂದು ಪರಿಗಣಿಸಲು ಬರುವುದಿಲ್ಲ. ದೈಹಿಕ ಶಿಕ್ಷಣವನ್ನು ಪಠ್ಯ ವಿಷಯ ಹಾಗೂ ಪರೀಕ್ಷಾ ವಿಷಯವಾದ ನಂತರ ಪರಿಗಣಿಸಲು ಪರಿಶೀಲಿಸಲಾಗುವುದು.

ಮಂಡಳಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸುವುದರ ಬಗ್ಗೆ

1200 - ಶ್ರೀ ಕೆ.ಎನ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 5300 ಮಂಡಲ ಪಂಚಾಯಿತಿಗಳಿದ್ದು ಅದರಲ್ಲಿ 1051 ಮಂಡಲಗಳಲ್ಲಿ ಈಗಾಗಲೇ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ. ಉಳಿದ ಮಂಡಲಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಎಷ್ಟು ವರ್ಷಗಳು ಬೇಕಾಗುತ್ತದೆ?

ಆ) 1994-95ನೇ ಸಾಲಿನಲ್ಲಿ ಎಷ್ಟು ಮಂಡಲ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡಿವೆ. ಮಂಜೂರಾಗಿ ನೀಡದಿದ್ದಲ್ಲಿ ವಿಳಂಬತೆಗೆ ಕಾರಣವೇನು?

ಇ) ವಾರ್ಷಿಕವಾಗಿ ಮಂಡಲ ಗ್ರಂಥಾಲಯಗಳನ್ನು ಹಂತ ಹಂತವಾಗಿ ಪ್ರಾರಂಭಿಸಲು ಸರ್ಕಾರದವರು ಯೋಜನೆ ರೂಪಿಸಿರುವರೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) 1995-96ರ ಸಾಲಿನಿಂದ ಪ್ರತಿ ವರ್ಷ 607 ಗ್ರಾಮ ಪಂಚಾಯಿತಿ (ಮಂಡಲ) ಗ್ರಂಥಾಲಯಗಳನ್ನು ಪ್ರಾರಂಭಿಸಿದರೆ, ಇನ್ನು 7 ವರ್ಷಗಳಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯಗಳನ್ನು ಒದಗಿಸಬಹುದು.

ಆ) ಗ್ರಂಥಾಲಯಗಳ ಸ್ಥಾಪನೆ ಮತ್ತು ಉಸ್ತುವಾರಿಯನ್ನು ಇನ್ನು ಮುಂದೆ ಜಿಲ್ಲಾ ಪಂಚಾಯತಿಗಳಿಗೆ ವಹಿಸಬೇಕೆಂಬ ವಿಷಯವನ್ನು ಸರ್ಕಾರವು ಪರಿಶೀಲಿಸುತ್ತಿರುವ ಕಾರಣ 1994-95ರಲ್ಲಿ ಮಂಡಲ ಗ್ರಂಥಾಲಯಗಳನ್ನು ಸ್ಥಾಪಿಸಲಿಲ್ಲ.

ಇ) ಜಿಲ್ಲಾ ಪಂಚಾಯಿತಿಗಳು ಈ ಕಾರ್ಯಕ್ರಮ ಕೈಗೊಳ್ಳಲು ಕಾರ್ಯಕ್ರಮ ರೂಪಿಸಲಾಗುವುದು.

ಶಿವಮೊಗ್ಗ ಮಹಿಳಾ ಪಾಲಿಟೆಕ್ನಿಕ್ ಕಟ್ಟಡ ಕಾಮಗಾರಿ ಕೆಲಸ ಕುರಿತು

751 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಮಹಿಳಾ ಪಾಲಿಟೆಕ್ನಿಕ್ ಕಟ್ಟಡದ ಕಾಮಗಾರಿ ಕೆಲಸವು ಯಾವ ಹಂತದಲ್ಲಿದೆ? ಯಾವಾಗ ಪೂರ್ಣಗೊಳ್ಳಬಹುದು?

ಆ) ಕಟ್ಟಡ ನಿರ್ಮಾಣದ ಟೆಂಡರ್ ಯಾವ ಕಂಪನಿಗೆ ಒಪ್ಪಿಸಲಾಗಿದೆ? ಹಾಗೂ ಕಟ್ಟಡದ ಪೂರ್ಣ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಕಾಲಾವಧಿ ವಿಧಿಸಲಾಗಿದೆ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ)

1) ಕಟ್ಟಡದ ಕಾರ್ಯ ಇನ್ನೂ ಪ್ರಾರಂಭಗೊಂಡಿಲ್ಲ.

2) ಜೂನ್‌ತಿಂಗಳ 1996ರ ಅವಧಿಯೊಳಗೆ ಮುಗಿಯುತ್ತದೆ.

ಆ) ಮೆಸರ್ಸ್ ರಾವ್ ಕನ್ಸ್‌ಟ್ರಕ್ಷನ್ ಕಂಪನಿ, ಬೆಂಗಳೂರು ಇವರಿಗೆ ನಿರ್ಮಾಣದ ಕೆಲಸವನ್ನು ಒಪ್ಪಿಸಲಾಗಿದೆ.

ನಿರ್ಮಾಣ ಕಾರ್ಯದ ಕೆಲಸವನ್ನು ಏಪ್ರಿಲ್ 1995ರ ಮೊದಲನೆ ವಾರದಲ್ಲಿ ಪ್ರಾರಂಭಿಸುತ್ತಾರೆ. ಮತ್ತು ಕಾಮಗಾರಿಯನ್ನು ಪೂರ್ಣಗೊಳಿಸಲು 15 ತಿಂಗಳ ಅವಧಿ ನಿಗದಿಪಡಿಸಲಾಗಿದೆ.

ಗುರುಮಿಠಕಲ್ ನಗರಕ್ಕೆ ಕ್ರೀಡಾಂಗಣವನ್ನು ಮಂಜೂರು ಮಾಡುವ ಬಗ್ಗೆ

1047 - ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಾದ್‌ಗೀರ್ ತಾಲ್ಲೂಕಿನ ಗುರುಮಿಟಕಲ್ ನಗರದಲ್ಲಿ ಕ್ರೀಡಾಂಗಣವನ್ನು ಸರ್ಕಾರ ಮಂಜೂರು ಮಾಡಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕಾಗಿ ಒದಗಿಸಿರುವ ಹಣ ಎಷ್ಟು? ಮತ್ತು ನಿರ್ಮಾಣದ ಹಂತವೇನು?

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಹೌದು

ಆ) ಸರ್ಕಾರದಿಂದ ರೂ 5.00 ಲಕ್ಷಗಳನ್ನು ಒದಗಿಸಲಾಗಿದೆ. ನೆಲ ಸಮತಟ್ಟು ಮಾಡುವ ಕೆಲಸವನ್ನು ಕಾರ್ಯಗತಗೊಳಿಸಲಾಗುತ್ತಿದೆ.

ರೋಣ ನಗರದಲ್ಲಿ ಕ್ರೀಡಾಂಗಣ ಅಭಿವೃದ್ಧಿ ಕುರಿತು

685 - ಶ್ರೀ ಶೈಲಪ್ಪ ಬಿದರೂರು (ರೋಣ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?